# 1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು.

## ಸಿಸಿ ಸಂಖ್ಯೆ : 745/2025

ಪಿರ್ಯಾದುದಾರರು : ಕವಲಂದೆ ಪೊಲೀಸ್ ಠಾಣೆ, ನಂಜನಗೂಡು

ವಿರುದ್ದ

ಆರೋಪಿಗಳು:

ತೀರ್ಥಪ್ರಸಾದ್ ಬಿನ್ ಲೇಟ್ ಕೆ ಪಿ ಜವರಯ್ಯ 54 ವರ್ಷ
ವಾಸ:ಕೆಸ್ತೂರು ಗ್ರಾಮ, ಯಳಂದೂರು ತಾಲ್ಲೂಕು ,ಚಾಮರಾಜನಗರ

*** *** ***

ಆಪಾದನೆ

ಶ್ರೀಮತಿ.ಸರಿತಾ ಕುಮಾರಿ.ಎ.ಎಂ, ಬಿ.ಎ.,ಎಲ್.ಎಲ್.ಬಿ., 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ಆಪಾದಿಸುವುದೇನೆಂದರೆ:-

ದಿನಾಂಕ:- 14.11.2024 ರಂದು ಮಧ್ಯಾಹ್ನ ಸುಮಾರು 12.00 ರಿಂದ 12.30 ಗಂಟೆ ಸಮಯದಲ್ಲಿ ನಂಜನಗೂಡು ತಾಲೂಕು ದೊಡ್ಡಕವಂದೆ ಗ್ರಾಮದ ಬಳಿ ನಂಜನಗೂಡು - ಚಾಮರಾಜನಗರ ಮುಖ್ಯ ರಸ್ತೆಯಲ್ಲಿ ಚಾಸಾ.2 ಲಕ್ಷಣ, ಅವರ ಹೆಂಡತಿ ಮಂಜುಳ, ಅವರ ಮಗಳು ಸಿಂಧು ರವರುಗಳು ರಸ್ತೆಯ ಎಡಭಾಗ ನಡೆದುಕೊಂಡು ಹೋಗುತ್ತಿದ್ದಾಗ, ಆರೋಪಿತರಾದ ನೀವು ಕೆ.ಎ 01 ಎನ್ ಡಿ 0207 ಕಾರಿನ ಚಾಲಕನಾಗಿದ್ದು, ಸದರಿ ಕಾರನ್ನು ನಂಜನಗೂಡು ಕಡೆಯಿಂದ ಚಾಮರಾಜನಗರ ಕಡೆಗೆ ಅತೀವೇಗ ಹಾಗೂ ಅಜಾಗರುಕತೆಯಿಂದ ಮಾನವ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಓಡಿಸಿಕೊಂಡು ಬಂದು ಡಿಕ್ಕಿ ಮಾಡಿದ್ದು, ನಂತರ ರಸ್ತೆ ದಾಟುತ್ತಿದ್ದ ಚಾಸಾ.3, 4 ಮತ್ತು 5 ರವರುಗಳಿಗೆ ಡಿಕ್ಕಿ ಮಾಡಿ ಅಪಘಾತ ಪಡಿಸಿರುತ್ತೀರಿ. ಆದ್ದರಿಂದ ಆರೋಪಿಯಾದ ನೀವು ಭಾರತೀಯ ನ್ಯಾಯ

ಸಂಹಿತೆಯ ಕಲಂ.281 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಎರಡನೆಯದಾಗಿ, ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಮಾಡಿದ ಸದರಿ ಅಪಘಾತದಿಂದ ಮಂಜುಳ ರವರಿಗೆ ತಲೆ, ಭುಜ, ಇತರೆ ಕಡೆ ಪೆಟ್ಟಾಗಿ ಸ್ಥಳದಲ್ಲಿ ಮೃತಪಟ್ಟಿರುತ್ತಾರೆ.ಆದ್ದರಿಂದ, ಆರೋಪಿಯಾದ ನೀವು ಅಪರಾಧಿಕ ಮಾನವ ಹತ್ಯೆ ಎಂದು ಪರಿಗಣಿಸಲಾಗದ ದುಡುಕಿನ ಮತ್ತು ನಿರ್ಲಕ್ಷ್ಯತನದ ವಾಹನ ಚಾಲನೆ ಮಾಡಿ ಮೇಲೆ ಹೇಳಿದ ವ್ಯಕ್ತಿಯ ಮರಣವನ್ನುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆಯ ಕಲಂ.106(1) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರೆಂದು ಆಪಾದಿಸಲಾಗಿದೆ.

ಮೂರನೆಯದಾಗಿ, ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಮಾಡಿದ ಸದರಿ ಅಪಘಾತದಿಂದ ಚಾಸಾ.2 ಲಕ್ಷ್ಮಣ ರವರಿಗೆ ಭುಜ, ತಲೆ, ಬೆನ್ನಿಗೆ ಸಣ್ಣಪುಟ್ಟ ತರಚಿದ ಗಾಯಗಳಾಗಿರುತ್ತದೆ. ಚಾಸಾ.4 ರವರ ಎಡಮೊಣಕಾಲಿಗೆ ಸಾಮಾನ್ಯ ಸ್ವರೂಪದ ಗಾಯ ಮತ್ತು ಚಾಸಾ.5 ರವರ ಮೈಕೈಗೆ ಸಣ್ಣ ಪುಟ್ಟ ತರಚಿದ ಗಾಯಗಳಾಗಿರುತ್ತವೆ. ಆದ್ದರಿಂದ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆಯ ಕಲಂ.125(ಎ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರೆಂದು ಆಪಾದಿಸಲಾಗಿದೆ.

ನಾಲ್ಕನೆಯದಾಗಿ, ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಮಾಡಿದ ಸದರಿ ಅಪಘಾತದಿಂದ ಚಾಸಾ.3 ರಾಚಪ್ಪ ರವರಿಗೆ ತಲೆ, ಎಡಗೈಯ ಕಮರಿಗೆ ಮತ್ತು ಚಾಸಾ.4 ರವರ ಎಡಮಂಡಿಚಿಪ್ಪಿಗೆ ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ.

ಆದ್ದರಿಂದ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆಯ ಕಲಂ.125(ಬಿ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರೆಂದು ಆಪಾದಿಸಲಾಗಿದೆ.

ಕೊನೆಯದಾಗಿ, ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಸದರಿ ಅಪಘಾತದ ನಂತರ ವಾಹನವನ್ನು ನಿಲ್ಲಿಸದೆ, ಗಾಯಾಳುಗಳಿಗೆ ಚಿಕಿತ್ಸೆಯನ್ನು ಕೊಡಿಸದೆ ಹಾಗೂ ಅಪಘಾತದ ಮಾಹಿತಿಯನ್ನು ಮಾಹಿತಿಯನ್ನು ಪೊಲೀಸರಿಗೆ ನೀಡಿದೆ ಹೊರಟುಹೋದ ಕಾರಣ ಭಾರತೀಯ ಮೋಟಾರು ಕಾಯಿದೆ ಕಲಂ 187 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

1. **ಈಗ ನಿಮಗೆ ಓದಿ ಹೇಳಿದ ನಿಮ್ಮ ಮೇಲಿನ ಆರೋಪ ನಿಮಗೆ ತಿಳಿಯಿತೇ?**
   **ಉಃ**

2. **ನಿಮ್ಮ ಮೇಲಿರುವ ಆರೋಪವನ್ನು ಒಪ್ಪಿಕೊಳ್ಳುವಿರಾ? ಅಥವಾ ನಿಮ್ಮ ಪರವಾಗಿ ವಿಚಾರಣೆ ನಡೆಸಲು ಬಯಸುವಿರಾ?**
   **ಉಃ**

(ಮೇಲ್ಕಂಡ ಆರೋಪವನ್ನು ಆರೋಪಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿ ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 29.10.2025 ರಂದು ತೆಗೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

**1ನೇ ಹೆಚ್ಚುವರಿ** ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ.,
ನಂಜನಗೂಡು.